ನಡೆಯಲು ಸಾಧ್ಯವಿಲ್ಲ. ಮೊತಿಜಾನ್ ಗಂಡನಿಂದ ಒಂದು ಸ್ಥಾನ ನಿರೀಕ್ಷೆ ಮಾಡ್ತಾಯಿದ್ದಳು, ಆದರೆ ಅದನ್ನೂ ಅತ್ತೆನೇ ತುಂಬಿಕೊಂಡು ಬಿಟ್ಟಿದಾಳೆ. ಗಂಡ ಅಬೂಲ್ ಇದೆಲ್ಲದರಾಚೆಗೆ ಇದ್ದ.

ಗಂಡನ ಜೊತೆ ಸಂಸಾರ ನಡೆಸೋಕೆ ಆಗ್ತಾಯಿಲ್ಲ ಅನ್ನೋದು ಅವಳಿಗೆ ತುಂಬಾ ದುಃಖವುಂಟುಮಾಡುತ್ತೆ. ಅವಳು ಹತ್ತಿರವಾಗಲು ಪ್ರಯತ್ನಿಸಿದಷ್ಟೂ ಗಂಡ ಸಂಸಾರದಿಂದ ಪಲಾಯನ ಮಾಡ್ತಾನೆ. ಮೊತಿಜಾನಳಿಗೆ ಸ್ಪಷ್ಟವಾಗಿ ಹೇಳಿದಾನೆ, 'ನನಗೆ ಏನೂ ಹೇಳಬೇಡ. ನನಗೇನೂ ಗೊತ್ತಿಲ್ಲ. ನಾನು ಏನೂ ಮಾಡೋಕೆ ಸಾಧ್ಯವಿಲ್ಲ, ಅಮ್ಮನೇ ಎಲ್ಲ. ಅಮ್ಮ ನನ್ನ ಎದೆ ಮೇಲೆ ಕಾಲಿಟ್ಟು ಕೂತಿದಾಳೆ'.

ಅಬೂಲ್ ಕೈಬಾಯಿ ಒದರುತ್ತಾ, ತುಟಿಯೂದಿಸಿಕೊಂಡು ಹೊಲಸು ಮಾತಾಡ್ತಾನೆ, ಯಾರಿಗೆ ಹೇಳ್ತಿದಾನೆ ಅಂತಾನೇ ಗೊತ್ತಾಗೋದಿಲ್ಲ. ಮೊತಿಜಾನ್ ಕಣ್ಣರಳಿಸಿಕೊಂಡು ಗಂಡನನ್ನ ನೋಡ್ತಾಳೆ. ದಿಗ್ಭ್ರಾಂತಗೊಂಡ ಮುಖ, ಕೆಂಪು ಕಣ್ಣು, ಸಂಸಾರದ ಬಗ್ಗೆ ಉದಾಸೀನ. ಸಂಸಾರದ ಯಾವ ಜವಾಬ್ದಾರೀನೂ ಬೇಡ. ಅವನದೊಂದು ಗಾಂಜಾ ಗುಂಪಿದೆ. ರೌಡಿಗಳ ಸಂಗವೂ ಇದೆ. ಜೋಬು ತುಂಬಾ ದುಡ್ಡು ತುಂಬ್ಕೊಂಡು ಪೇಟೆಬೀದಿಲಿರೊ ಸೂಳೆಮನೆಗೆ ಆರಾಮಾಗಿ ಹೋಗ್ತಾನೆ. ಅವನಿಗೆ ಹೆಂಡತಿ ಏನೂ ಅಲ್ಲ, ತಾಯಿನೂ ಏನೂ ಅಲ್ಲ. ಈ ಸತ್ಯವನ್ನ ಅರ್ಥ ಮಾಡಿಕೊಂಡ ಮೊತಿಜಾನ್ ಒಳಗೊಳಗೆ ಅದನ್ನ ಅದುಮಿಟ್ಕೊಂಡಿದಾಳೆ. ಅವಳೂ ಅತ್ತೆ ತರಹ ಗಟ್ಟಿಯಾಗೋಕೆ ಬಯಸ್ತಾಳೆ. ಅತ್ತೆಯ ಮೂದಲಿಕೆಯ ಮಾತುಗಳು ಅವಳನ್ನ ಒಳಗೊಳಗೆ ಛಲಗಾತಿಯನ್ನಾಗಿಸುತ್ತಿವೆ.

ಈ ಸಂಸಾರದ ಆರಂಭವೇನೂ ಚೆನ್ನಾಗಿತ್ತೇ? ಹೊಸ ಸಂಸಾರಕ್ಕೆ ಕಾಲಿಟ್ಟ ಮೊತಿಜಾನಳಿಗೆ ಏನೂ ಅರ್ಥವಾಗ್ತಿರಲಿಲ್ಲ. ಈಗ ಹಿಂದಿರುಗಿ ನೋಡಿದರೆ, ಮದುವೆಯ ನಾಲ್ಕಾರು ದಿನಗಳೂ ಚೆನ್ನಾಗಿರಲಿಲ್ಲ. ಅತ್ತೆ ಅವಳ ಜೊತೆ ಸರಿಯಾಗಿ ಮಾತಾಡೋದಿಲ್ಲ. ಭಯಪಡುತ್ತಾ ಅತ್ತೆ ಮುಖ ನೋಡ್ತಿದ್ದಳು ಮೊತಿಜಾನ್. ಗಂಡನ್ನ ಅರ್ಥಮಾಡಿಕೊಳ್ಳೋಕೆ ಆಗಲಿಲ್ಲ, ಅವನೂ ಸರಿಯಾಗಿ ಮಾತಾಡೋದಿಲ್ಲ. ರಾತ್ರಿಯಿಡೀ ಬೀಡಿ ಸೇದ್ತಾಯಿರ್ತಾನೆ. ರೂಮೆಲ್ಲ ಹೊಗೆಯಿಂದ ತುಂಬಿಕೊಂಡಿರುತ್ತೆ. ಜೋರಾಗಿ ಉಸಿರಾಡೋಕೂ ಆಗಲ್ಲ. ಅವಳಿಗೆ ಭಯ, ಬರೀ ಭಯ! ಹೆಜ್ಜೆಯಿಡೋಕೆ ಭಯ, ಸೀನೋಕೂ ಭಯ. ಈಲೀಶ್ ಮೀನಿನ ಮುಳ್ಳು ಬಿಡಿಸುವಾಗ ಕೈ ಹಾಗೆ ನಿಂತುಬಿಡುತ್ತೆ. ಅನ್ನದ ತುತ್ತು ಬಾಯಿಗಿಡುವಾಗ ಕಣ್ಣಂಚಲ್ಲಿ ಗಮನಿಸಿದರೆ ಅತ್ತೆ ಅವಳನ್ನೇ ದುರುಗುಟ್ಟಿ ನೋಡ್ತಾಯಿರ್ತಾಳೆ, ನುಂಗೋಕೂ ಭಯ. ಏನೋ ಎದೆಯೊಳಗೆ ದಢದಢ ಉರುಳಿದಂಗಾಗುತ್ತೆ. ಮಳೆಗಾಲದಲ್ಲಿ ತುಂಬಿ ಹರಿಯುವ ಮಹಾನಂದೊ ನದಿಯಂತೆ, ಕಿವಿಗೊಟ್ಟರೆ ನೀರಿನ ಅಲೆಗಳ ರಭಸದ ಧ್ವನಿ ದೇಹದೊಳಗಿಂದಲೂ ಕೇಳಿಸುತ್ತೆ.

ಮದುವೆಯಾದ ಎಂಟು ದಿನಕ್ಕೆ ಅತ್ತೆ ಎತ್ತಿದ ವಿಷಯ ಕೇಳಿ ಅವಳು ಭಯದಿಂದ ಮರಗಟ್ಟಿಹೋದಳು. ಆಗತಾನೇ ಊಟ ಮುಗಿದಿತ್ತು, ಅಲ್ಯುಮಿನಿಯಂ ತಟ್ಟೆಯಲ್ಲಿ ಇನ್ನೂ ಸಾರು ಇತ್ತು. ಗುಲ್ನೂರ್ ಅಂದಳು, 'ಮದುವೆಲೀ ನಿಮ್ ಬಾಬಾ ನಮ್ಮ ಅಬೂಲ್ಗೆ ಸೈಕಲ್, ವಾಚು ಕೊಡ್ತೀನಿ ಅಂದಿದ್ದ. ಇನ್ನೂ ಕೊಟ್ಟಿಲ್ಲ, ಯಾಕೆ?' ಮೊತಿಜಾನ್ ಮೌನವಾಗಿದ್ದಳು. ತೋರುಬೆರಳಿಂದ ತಟ್ಟೆಯೊಳಗೆ ಹಿಂದೆಮುಂದೆ ಬರೀತಾಯಿದ್ದಳು. ಬಾಬಾನ ಸ್ಥಿತಿ ಅವಳಿಗೆ ಗೊತ್ತು. ಏನ್ ಸಂಪಾದನೆಯಾಗುತ್ತೋ ಅದರ ಎರಡಷ್ಟು ಖರ್ಚಾಗುತ್ತೆ ಸಂಸಾರಕ್ಕೆ. ವಾಚು, ಸೈಕಲ್ ಎಲ್ಲಿಂದ ತಂದುಕೊಟ್ಟಾನು? ಎಲ್ಲಿಂದ ಸಂಪಾದಿಸ್ತೀನಿ ಅಂತ ಗೊತ್ತಿಲ್ಲದೆ ಇವೆಲ್ಲ ಕೊಡ್ತೀನಿ ಅಂತ ಮಾತು ಕೊಟ್ಟಿದಾನೆ. ಗುಲ್ನೂರ್ ಗುರಾಯಿಸಿದಳು, 'ಮಾತೇ ಆಡ್ತಾಯಿಲ್ಲ?'

ಮೊತಿಜಾನ್ ಕಣ್ಣಲ್ಲಿ ತುಂಬಿದ ನೀರು ಸುರಿಯದಂತೆ ತಡೆಯುತ್ತಾ ಅಂದಳು, 'ನನಗೇನೂ ಗೊತ್ತಿಲ್ಲ'.